ವರದಿಗಳನ್ನೊಪ್ಪಿಸುವುದು

ಶ್ರೀ ಬಿ. ಆರ್. ಯಾವಗಲ್.— ಅಧ್ಯಕ್ಷರೇ, ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಏಳನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎಚ್. ಕೆ. ಕುಮಾರಸ್ವಾಮಿ (ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ ಅವರ ಪರವಾಗಿ).— ಅಧ್ಯಕ್ಷರೇ, ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಏಳನೆಯ ವರದಿಯ ನಿರ್ಣಯಗಳನ್ನು ನಾನು ಅನುಮೋದಿಸುತ್ತೇನೆ.

ಅಧ್ಯಕ್ಷರು.— ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

SRI. J.A. FERNANDEZ (Chairman- Committee on Papers).— Sir I present the Fifth Report of the Committee on Papers laid on the Table.

ಅಧ್ಯಕ್ಷರು.— ವರದಿಯನ್ನು ಸಭೆಗೆ ಒಪ್ಪಿಸಲಾಯಿತು.

ಗಮನ ಸೆಳೆಯುವ ಸೂಚನೆ

ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ನಡೆದ ಕೋಮು ಗಲಭೆ ಹಾಗೂ ಶಾಸಕರ ಮೇಲೆ ಹಲ್ಲೆಯ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕೋಲಾರ ಜಿಲ್ಲೆ ಸುತ್ತಮುತ್ತ ಹಳ್ಳಿಗಳಲ್ಲಿ ಹಬ್ಬಿದ ಕೋಮು ಗಲಭೆಯ ಹಾಗೂ ಕೆಲವು ಶಾಸಕರ ಮೇಲೆ ನಡೆದ ಹಲ್ಲೆಯ ಬಗ್ಗೆ ಗೃಹ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು.— ಮಾನ್ಯ ವೆಂಕಟರಾಮಯ್ಯನವರು ತಾವು ಮಂತ್ರಿಗಳ ಗಮನ ಸೆಳೆಯಿರಿ ಎರಡಕ್ಕೂ ಒಟ್ಟಿಗೆ ಉತ್ತರ ಕೊಡುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.— ಕೋಲಾರ ಜಿಲ್ಲೆಯ ಕ್ಯಾಲನೂರು ಮತ್ತು ಸುತ್ತಮುತ್ತ ಕೋಮು ಗಲಭೆ ನಡೆದು ಅಪಾರ ಆಸ್ತಿಪಾಸ್ತಿ ನಷ್ಟವಾದ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ನಾನು ಗಮನ ಸೆಳೆಯುವ ಸೂಚನೆ ಕಳುಹಿಸಿರುವ ವಿಚಾರವನ್ನು ಸಪರೇಟಾಗಿ ಚರ್ಚೆ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಆಮೇಲೆ ಕ್ಲಾರಿಫಿಕೇಶನ ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ನೀರಾವರಿ ಹಾಗೂ ಯೋಜನಾ ಮಂತ್ರಿಗಳು).— ದಿನಾಂಕ ೧೮-೫-೧೯೮೮ರಂದು ಮೇಮಗಲ್ ಪೋಲೀಸ್ ಠಾಣೆಯ ಸರಹದ್ದಿನಲ್ಲಿರುವ ಕ್ಯಾಲನೂರು ಗ್ರಾಮದಲ್ಲಿ ಬೆಳಿಗ್ಗೆ ೧೦ ರಿಂದ ೧೧ ಗಂಟೆಗೆ ಸುಮಾರು ೨,೦೦೦ ಮುಸ್ಲಿಂ ಬಾಂಧವರು ಈದ್ಗಾದಲ್ಲಿ ಪ್ರಾರ್ಥನೆ ಸಲ್ಲಿಸಿ ವಾಪಸ್ಸು ಮಸೀದಿಗೆ ಬಂದರು. ಆಗ ಸ್ಥಳೀಯ ಶಾಸಕರಾದ ಶ್ರೀ ಬೈರೇಗೌಡರು ಅವರನ್ನುದ್ದೇಶಿಸಿ ಮಾತನಾಡುತ್ತಿದ್ದಾಗ ಸುತ್ತಮುತ್ತಲಿನ ಸುಮಾರು ೧೦೦೦ ಹಿಂದೂ ಬಾಂಧವರು ಇವರಿಗೆ ಕೀಟಲೆ ಮಾಡಿ ಗಲಾಟೆ ಮಾಡಿದರು. ಪ್ರಸನ್ನ ಮತ್ತು ಪ್ರಕಾಶ್ ಎಂಬ ತರುಣರು ಸುತ್ತ ಮುತ್ತಲಿನ ಹಳ್ಳಿಗಳಿಗೆ ಹೋಗಿ ಶಿಡ್ಲಘಟ್ಟದಲ್ಲಿ ಹಿಂದೂಗಳನ್ನು ಮುಸ್ಲೀಮರು ಕೊಂದು ಹಾಕಿದ್ದಾರೆಂದು ಸುಳ್ಳು ಸುದ್ದಿಯನ್ನು ಹಬ್ಬಿಸಿ ಹಿಂದೂಗಳನ್ನು ಪ್ರಚೋದಿಸಿದರು. ಇಷ್ಟರೊಳಗೆ ಹಿಂದೂ ಮತ್ತು ಮುಸ್ಲೀಮರ ನಡುವೆ ಪರಸ್ಪರ ಮಾತಿಗೆ ಮಾತು ಬೆಳೆದು ಗಲಭೆ ನಡೆದು ಕೃಷ್ಣಪ್ಪ ಎಂಬುವವರಿಗೆ ಜಖಂ ಆಯಿತು. ಈ ಗಲಭೆಗಳಲ್ಲಿ ಹಿಂದೂಗಳ ೬ ಗುಡಿಸಲುಗಳು, ೨ ಮನೆಗಳು ಮತ್ತು ೧ ಅಂಗಡಿಗೆ ಮತ್ತು ಮುಸ್ಲೀಮರ ೧೧ ಗುಡಿಸಲುಗಳಿಗೆ ೪ ಮನೆಗಳಿಗೆ ಮತ್ತು ೧ ಅಂಗಡಿ ಹಾಗೂ ಒಂದು ಮಸೀದಿಗೆ ಬೆಂಕಿಯಿಂದ ಲುಕ್ಸಾನು ಮಾಡಿದ್ದಲ್ಲದೆ ಲೂಟಿ ಮಾಡಲಾಯಿತು.